**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಸ್ಪೆಶಲ್ ಕೇಸ್ ಸಂಖ್ಯೆ 508/2023**

ಫಿರ್ಯಾದುದಾರರು : ಸರ್ಕಾರದ ಪರವಾಗಿ ಕುಂದಾಪುರ ಗ್ರಾಮಾಂತರ ಪೊಲೀಸರು

ವಿರುದ್ಧ

ಆರೋಪಿತರು : ರೋನಾಲ್ಡ್ ಡಿ ಸೋಜಾ ಯಾನೆ ರೋನಿ ಡಿ ಸೋಜಾ

**ದೋಷಾರೋಪಣೆ**

ಶ್ರೀ ಅಬ್ದುಲ್ ರಹೀಮ್ ಹುಸೇನ್ ಶೇಖ್, ಬಿ.ಎಸ್‌ಸಿ., ಬಿ.ಇಡಿ., ಎಲ್‌ಎಲ್.ಬಿ. (ಸ್ಪೆಷಲ್), ಕುಂದಾಪುರ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶನಾದ ನಾನು

ರೋನಾಲ್ಡ್ ಡಿ ಸೋಜಾ ಯಾನೆ ರೋನಿ ಡಿ ಸೋಜಾ
ತಂದೆ: ರೊಸಾರಿಯೋ ಡಿ ಸೋಜಾ
ವಯಸ್ಸು: 48 ವರ್ಷ,
ವಾಸ: ನಾಗಬನದ ಹತ್ತಿರ, ಸಟ್ವಾಡಿ,
ಕಂದಾವರ ಗ್ರಾಮ, ಕುಂದಾಪುರ ತಾಲೂಕು,
ಉಡುಪಿ ಜಿಲ್ಲೆ.

ನಿಮ್ಮ – ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ಮೊದಲನೆಯದಾಗಿ ಫಿರ್ಯಾದಿ ಕುಮಾರಿ ಲಕ್ಷ್ಮೀ (ಚಾಸಾ.1) ರವರ ಗಂಡ ರಾಘವೇಂದ್ರ ರವರು ಅವಳು ಮತ್ತು ಅವಳ ಮಕ್ಕಳನ್ನು ಬಿಟ್ಟು ದೂರ ಇದ್ದಿದ್ದ ವಿಷಯ ಫಿರ್ಯಾದಿದಾರಳು ಕೂಲಿ ಕೆಲಸಕ್ಕೆ ಬಂದಾಗ ಅವಳನ್ನು ಪರಿಚಯಿಸಿ ತಿಳಿದುಕೊಂಡು ಅವಳ ಜೊತೆಯಲ್ಲಿ ಮೊಬೈಲ್ ಸಂಪರ್ಕವನ್ನು ಬಳಸಿ 2021 ನೇ ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಅವಳು ವಾಸವಾಗಿದ್ದ ಕೊರ್ಗು ನಿಲಯಕ್ಕೆ ಭೇಟಿ ಕೊಟ್ಟು ಅವಳ

ಗಂಡ ವಿಚ್ಛೇದನ ನೀಡಿದ್ದಲ್ಲಿ ಅವಳನ್ನು ಮದುವೆಯಾಗಿ ಮಕ್ಕಳನ್ನು ನೋಡಿಕೊಳ್ಳುತ್ತೇನೆ ಅಂತ ಸುಳ್ಳು ಆಶ್ವಾಸನೆ ನೀಡಿ ಅವಳ ಮನಸ್ಸಿನ ವಿರುದ್ಧವಾಗಿ ಬಲತ್ಕಾರದಿಂದ ಸಂಭೋಗ ಮಾಡಿ ಅತ್ಯಾಚಾರವೆಸಗಿ ಕಲಂ 376 (2) (ಎನ್) ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಎರಡನೇಯದಾಗಿ ನೀನು (ಆರೋಪಿ) ಫಿರ್ಯಾದಿದಾರಳನ್ನು ಮದುವೆಯಾಗುತ್ತೇನೆಂದು ಪುಸಲಾಯಿಸಿ ನಂಬಿಸಿ ಬಲಾತ್ಕಾರ ಮಾಡಿ ಸದ್ರಿ ವಿಷಯ ಯಾರಿಗೂ ಹೇಳಬೇಡಾ ಹೇಳಿದರೆ ನಿನ್ನ ಮಾನ ಹರಾಜು ಮಾಡುತ್ತೇನೆ ಅಂತ ಬೆದರಿಸಿ ಅವಳಿಂದ ಒಟ್ಟು ರೂಃ60,000-00 ಹಣವನ್ನು ಪಡೆದಿದ್ದಲ್ಲದೇ ಸದ್ರಿ ಹಣವನ್ನು ಮರುಪಾವತಿಸದೇ ಫಿರ್ಯಾದಿದಾರಳಿಗೆ ಸಿಗದೇ ತಲೆಮರೆಸಿಕೊಂಡಿದ್ದು, ದಿನಾಂಕಃ25-05-2023 ರಂದು ಮಧ್ಯಾಹ್ನ ಸಮಯ ಸುಮಾರು 1.00 ಗಂಟೆಗೆ ಕಂದಾವರ ಗ್ರಾಮದ ಸಟ್ವಾಡಿ ಎಂಬಲ್ಲಿ ನೀನು (ಆರೋಪಿ) ಸಿಕ್ಕಿದಾಗ ಅವಳು "ಯಾಕೆ ತಪ್ಪಿಸಿಕೊಂಡು ಮೋಸ ಮಾಡಿ ಸಿಗದೇ ತಿರುಗಾಡುತ್ತೀಯಾ" ಅಂತ ವಿಚಾರಿಸಿದಾಗ ನೀನು (ಆರೋಪಿ) ಅವಳನ್ನು ಉದ್ದೇಶಿಸಿ "ಬೇವರ್ಸಿ ರಂಡೆ", ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ ಸಾರ್ವಜನಿಕ ಶಾಂತತೆಗೆ ಭಂಗ ತರಲು ಪ್ರಚೋದನೆ ನೀಡಿ ಕಲಂ 504 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಮೂರನೇದಾಗಿ ದಿನಾಂಕಃ25-05-2023 ರಂದು ಮಧ್ಯಾಹ್ನ ಸಮಯ ಸುಮಾರು 1.00 ಗಂಟೆಗೆ ನಿನ್ನನ್ನು (ಆರೋಪಿ) ಫಿರ್ಯಾದಿದಾರರು ಭೇಟಿಯಾದಾಗ ಅವಳು ಯಾಕೆ ಮದುವೆಯಾಗುತ್ತೇನೆಂದು ದುಡ್ಡನ್ನು ಪಡೆದು ಹಿಂತಿರುಗಿಸದೇ ತಪ್ಪಿಸಿಕೊಂಡು ತಿರುಗುತ್ತಾ ಮೋಸ ಮಾಡುತ್ತೀ ಎಂದು ನಿನ್ನನ್ನು (ಆರೋಪಿ) ಕೇಳಿದಾಗ ಅವಳನ್ನು ಉದ್ದೇಶಿಸಿ "ಬೇವರ್ಸಿ ರಂಡೆ ನೀನು ಕೂಸಾಳು ಜಾತಿಯವಳು, ನಿನ್ನನ್ನು ಮದುವೆಯಾಗಲು ಆಗುತ್ತದಾ? ನೀನು ಇನ್ನು ಮುಂದಕ್ಕೆ ನನ್ನ ಹತ್ತಿರ ಬಂದರೇ ನಿನ್ನನ್ನು ಹಾಗೂ ನಿನ್ನ

ಮಕ್ಕಳನ್ನು ಕೊಂದು ಇದೇ ಚಟ್ಲಿ ಕೆರೆಗೆ ಬಿಸಾಡುತ್ತೇನೆ" ಎಂದು ಜೀವ ಬೆದರಿಕೆ ಹಾಕಿ ಕಲಂ 506 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀ.

ನಾಲ್ಕನೇದಾಗಿ ನೀನು (ಆರೋಪಿ) ಫಿರ್ಯಾದಿದಾರಳನ್ನು ಪ್ರೀತಿಸುವ ನೆಪದಲ್ಲಿ ಅವಳೊಂದಿಗೆ ಅನ್ಯೋನ್ಯತೆಯಿಂದ ಇರುತ್ತ ಅವಳನ್ನು ಮದುವೆಯಾಗುವುದಾಗಿ ಪುಸಲಾಯಿಸಿ ನಂಬಿಸಿ ಫಿರ್ಯಾದಿದಾರರು ವಾಸ್ತವ್ಯ ಮಾಡಿಕೊಂಡಿದ್ದ ಮನೆಗೆ ಬಂದು ಅವಳ ಇಚ್ಛೆಗೆ ವಿರುದ್ಧವಾಗಿ ಬಲಾತ್ಕಾರವಾಗಿ ಸಂಭೋಗ ನಡೆಸಿದ್ದು, ನಂತರ ಫಿರ್ಯಾದಿದಾರರು ಮದುವೆ ಮಾಡಿಕೊಳ್ಳಲು ಕೇಳಿದಾಗ ನೀನು "ಬೇವರ್ಸಿ ರಂಡೆ ನೀನು ಕೂಸಾಳು ಜಾತಿಯವಳು, ನಿನ್ನನ್ನು ಮದುವೆಯಾಗಲು ಆಗುತ್ತದಾ?" ಎಂದು ಹೇಳಿ ಆಕೆಯನ್ನು ಮದುವೆಯಾಗಲು ನಿರಾಕರಿಸಿ ನಂಬಿಕೆ ದ್ರೋಹವೆಸಗಿ ಕಲಂ 417 ಭಾ.ದಂ.ಸಂ. ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಕೊನೆಯದಾಗಿ ಫಿರ್ಯಾದಿ ಕುಮಾರಿ ಲಕ್ಷ್ಮೀ (ಚಾಸಾ.1) ರವರು ಪರಿಶಿಷ್ಟ ಪಂಗಡಕ್ಕೆ (ಆದಿ ದ್ರಾವಿಡ) ಸೇರಿದವರು ಎನ್ನುವುದು ನಿನಗೆ (ಆರೋಪಿಗೆ) ಗೊತ್ತಿದ್ದರೂ ಸಹ ನೀನು (ಆರೋಪಿ) ಫಿರ್ಯಾದಿ ಕುಮಾರಿ ಲಕ್ಷ್ಮೀ (ಚಾಸಾ.1) ರವರನ್ನು ಪರಿಚಯಿಸಿಕೊಂಡು ಪ್ರೀತಿಸಿ ಮದುವೆಯಾಗುತ್ತೇನೆಂದು ನಂಬಿಸಿ ಬಲಾತ್ಕಾರವಾಗಿ ಸಂಭೋಗ ನಡೆಸಿ ನಂತರ ದಿನಾಂಕಃ25-05-2023 ರಂದು ಮಧ್ಯಾಹ್ನ ಸಮಯ ಸುಮಾರು 1.00 ಗಂಟೆಗೆ ಫಿರ್ಯಾದಿದಾರಳು ನಿನ್ನಲ್ಲಿ (ಆರೋಪಿ) ಮದುವೆ ಮಾಡಿಕೊಳ್ಳಲು ಕೇಳಿದಾಗ ನೀನು (ಆರೋಪಿ) ಅವಳನ್ನು ಉದ್ದೇಶಿಸಿ "ನೀನು ಕೂಸಾಳು ಜಾತಿಯವಳು, ನಿನ್ನನ್ನು ಮದುವೆಯಾಗಲು ಆಗುತ್ತದಾ?" ಎಂದು ಫಿರ್ಯಾದಿದಾರಳು ಪರಿಶಿಷ್ಟ ಪಂಗಡಕ್ಕೆ ಸೇರಿದವಳೆಂಬ ಕಾರಣಕ್ಕೆ ಮದುವೆ ಮಾಡಿಕೊಳ್ಳಲು ನಿರಾಕರಿಸಿ ಕಲಂ 3(1) (r) (s) (w-i), 3(2)(v-a), 3(2)(v) ಪರಿಶಿಷ್ಟ ಜಾತಿ/ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಅಡಿಯಲ್ಲಿ ಅಪರಾಧವೆಸಗಿರುತ್ತೀ.

ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ವಿಚಾರಣೆಗೆ ಒಳಪಡಿಸಲು ಆದೇಶಿಸುತ್ತೇನೆ.

ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರವನ್ನು ದೃಢೀಕರಿಸಲಾಗಿದೆ.

**ದಿನಾಂಕಃ14-07-2025** **ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕುಂದಾಪುರ.**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ**

**ಸ್ಪೆಶಲ್ ಕೇಸ್ ಸಂಖ್ಯೆಃ 508/2023**

**ಫಿರ್ಯಾದುದಾರರು** ಃ ಸರ್ಕಾರದ ಪರ ಕುಂದಾಪುರ ಗ್ರಾಮಾಂತರ ಪೊಲೀಸರು

**ವಿರುದ್ಧ**

**ಆರೋಪಿ** ಃ ರೋನಾಲ್ಡ್ ಡಿ ಸೋಜಾ ಯಾನೆ ರೋನಿ ಡಿ ಸೋಜಾ
ತಂದೆಃ ರೊಸಾರಿಯೋ ಡಿ ಸೋಜಾ
ವಯಸ್ಸುಃ **48** ವರ್ಷ,
ವಾಸಃ ನಾಗಬನದ ಹತ್ತಿರ, ಸಟ್ವಾಡಿ,
ಕಂದಾವರ ಗ್ರಾಮ, ಕುಂದಾಪುರ ತಾಲೂಕು,
ಉಡುಪಿ ಜಿಲ್ಲೆ.

**ಆರೋಪಿಯ ಹೇಳಿಕೆ**

**ಪ್ರಶ್ನೆ 1.** ಈಗ ನಿಮಗೆ ಓದಿ ಹೇಳಿದ ಆರೋಪವನ್ನು ಕೇಳಿದ್ದೀರಾ?

ಉತ್ತರಃ **Yes**

ಪ್ರಶ್ನೆ **2.** ನಿಮ್ಮ ವಿರುದ್ಧ ಆರೋಪಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಆರೋಪ ವಿಚಾರಣೆ ಮಾಡಬೇಕೆಂದು ಹೇಳುತ್ತೀರಾ?

ಉತ್ತರಃ **Claimed to be tried.**

ದಿನಾಂಕಃ**14-07-2025**

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕುಂದಾಪುರ**